


ಇಲ್ಲಿಗೆ ಬಂದು ರೆಸ್ಟ್ ತಗೊಂಡು ಹೋದ ವಿಷಯ ಅತ್ತಿಗೆಗೆ ಗೊತ್ತಾಗಬಾರ್ದು' ಅನ್ನುತ್ತಾನೆ. ಇಬ್ಬರೂ ಸಣ್ಣಗೆ ನಗುತ್ತೇವೆ. ಕೃತಜ್ಞತೆಯ ಪೋಸ್ ಕೊಟ್ಟು ಹೊರಟು ಹೋಗುತ್ತಾನೆ.

ಹೀಗೇ ಅವನು ಆಗಾಗ ಬಂದು ಕೀ ಪಡೆದು ಸ್ವಲ್ಪ ಹೊತ್ತು ರೆಸ್ಟ್ ಮಾಡಿ ಕೀ ಕೊಟ್ಟು ಹೋಗೋದು ನಡೆದಿರುತ್ತದೆ. ಪಂಕಜಳ ಓದಿನ ಬಗ್ಗೆಯೂ ವಿಚಾರಿಸಿಕೊಳ್ಳುತ್ತಾನೆ. ನಿಮ್ಮ ಡಾಟರ್ ತುಂಬಾ ಸ್ಮಾರ್ಟ್ ಆಂಟಿ' ಎಂದು ಚಹಾ ಕುಡಿದ ಋಣ ತೀರಿಸುತ್ತಾನೆ. ಇವಳೂ ಅವನತ್ತ ಸಮ್ಮೋಹನಾಸ್ತ್ರ ಪ್ರಯೋಗಿಸದೆ ಇರುವವಳಲ್ಲ ಡಾಕ್ಟರ್ ಗಂಡ ಯಾರಿಗೆ ಬೇಡ? ಒಂದೆರಡು ಸಲ ಹೀಗೆ ಬಂದವ ಆಮೇಲೆ ಬರುವುದೇ ಇಲ್ಲ. ಅವನಿಗಾಗಿ ಕಾದು ಕಾದು ಏಕಾಗ್ರಚಿತ್ತಳಾಗಲು ಯತ್ನಿಸುತ್ತಾಳೆ. ಮೈಮನದಲೆಲ್ಲಾ ಮೆಡಿಕಲ್ ಬಾಯ್ ತುಂಬಿಕೊಂಡಿರುತ್ತಾನೆ. ಅವನ ಹೆಸರೇನೋ ತಿಳಿದುಕೊಳ್ಳಲು ಅಮ್ಮನಿಗೆ ಹೇಳಬೇಕೆಂದುಕೊಳ್ಳುವಾಗಲೇ ಯಾರೋ ಜೋರಾಗಿ 'ರೀ' ಎಂದು ಕೂಗಿದಂತಾದಾಗ ಚಂಗನೆ ಹಾರಿ ಹೊರಬರುತ್ತಾಳೆ.

ಅವನದೇ ಧ್ವನಿ! ಅವನೇ ನಿಂತಿರುತ್ತಾನೆ ಅದೇಕೋ ನಾಚಿ ಬಾಗಿಲ ಮರೆಯಲ್ಲಿ ನಿಲ್ಲುತ್ತಾಳೆ' ಅಮ್ಮ ಇಲ್ಲ ಫ್ರೆಂಡ್ ಮನೆಗೆ ಹೋಗಿದಾರೆ' ಅಂತಾಳೆ 'ಕೀ ಬೇಕೇ ಇವಳೇ ಕೇಳುತ್ತಾಳೆ. ಅವನು ಹ್ಹಿಹ್ಹಿಹಿಹಿ ಮಾಡುತ್ತಾನೆ. ಅವನ ಮೋಹಕ ನೋಟಕ್ಕೆ ಮರುಳಾಗಿ ಮೈಮರೆತವಳಂತೆ ಎದ್ದು ಹೋಗಿ ಕೀ ತಂದೊಪ್ಪಿಸುತ್ತಾಳೆ. ಅವನು ಕೀ ಬಿಟ್ಟು ಆಕೆಯ ಕೈಹಿಡಿದಾಗ ಕೊಸರಾಡಿ ಬಿಡಿಸಿಕೊಳ್ಳುತ್ತಾಳೆ. ಒಳಬರುತ್ತಾಳೆ. ಅವನೂ ಒಳ ಬಂದು ಹಿಂದಿನಿಂದ ತಬ್ಬುತ್ತಾನೆ. ಅವಳನ್ನು ಅವನತ್ತ ತಿರುಗಿಸಿಕೊಂಡವನೆ ಮುದ್ದಿಡುತ್ತಾನೆ. ಹಿಡಿತ ಬಿಗಿಯಾದಾಗ ತಾನೆಲ್ಲಿ ಅವನಲ್ಲಿಯೇ ಲೀನವಾಗಿ ಬಿಡುವೇನೋ ಎಂದಂಜಿ' ಅಮ್ಮ ಬಂದ್ರೂ' ಎಂದು ಕಷ್ಟಪಟ್ಟು ಉಸುರುತ್ತಾಳೆ. ಪಂಕಜ ಮುದ್ದಿಸಿಕೊಳ್ಳುತ್ತಾಳೆ. ಸಾರಿ... ರೀ ಎಂದವನು ಪಿಳಿಪಿಳಿಸಿ 'ಬರ್ತೀನಿ' ಎಂದು ಕಣ್ಣುಗಳಲ್ಲಿಯೇ ಹೇಳಿ ಎದುರು ಮನೆಯತ್ತ ಹೆಜ್ಜೆ ಹಾಕುತ್ತಾನೆ. ಅವಳ ದೇಹವೆಲ್ಲಾ ಬೆದರಿ ಬೆವರೊಡೆದಿರುತ್ತದೆ. ಬಿಸಿಲಿನಿಂದ ಕಾದ ನೆಲಕ್ಕೆ ಮಳೆ ಬಿದ್ದ ಭಾವ. ದೇಹದ ನರನರಗಳಲ್ಲೂ ವಸಂತ ಚಿಗುರೊಡೆದ ಅನುಭಾವ. ಬಾಗಿಲು ಬಳಿ ಬಂದು ನಿಂತು ಎದುರು ಮನೆಯತ್ತ ನೋಡುತ್ತಾಳೆ. ಬಾಗಿಲು ಮುಚ್ಚಿರುತ್ತದೆ. ಪಂಕಜ ಬಾಗಿಲು ಬಳಿ ಬಂದು ನಿಂತು ಎದುರು ಮನೆಯತ್ತ ನೋಡುತ್ತಾಳೆ. ಬಾಗಿಲು ಮುಚ್ಚಿರುತ್ತದೆ. ಪಂಕಜ ಬಾಗಿಲು ಮುಚ್ಚಿ ರೂಮಿಗೆ ಬಂದು ಮಂಚದ ಮೇಲುರುಳುವಳು. ಅವನ ಜೊತೆ ಕಾರಿನಲ್ಲಿ ಹಾರಿದಂತೆ, ಡಾಕ್ಟರ್ ಹೆಂಡತಿಯಾಗಿ ಗೆಳತಿಯರ ಎದುರು ಬೀಗಿದಂತೆ ಏನೇನೋ ಹಗಲುಗನಸುಗಳು.

ಯಾರೋ ಬಾಗಿಲು ಬಡಿದ ಶಬ್ದಕ್ಕೆ ಎಚ್ಚರವಾಗಿ ಬಿಡುತ್ತದೆ. ಬಾಗಿಲು ತೆರೆಯುತ್ತಾಳೆ. 'ಎಂತಹ ನಿದ್ದೆಯೇ ನಾಗೂ ಇಷ್ಟು ಹೊತ್ತನಲ್ಲಿ...' ಎಂದಾಕ್ಷೇಪಿಸುತ್ತ ಅಮ್ಮ ಒಳ ಬಂದಾಗ ಪಂಕಜ ಅಮ್ಮನ ಯಾವ ಮಾತಿಗೂ ಉತ್ತರ ಕೊಡದೆ ಹಾಡೊಂದನ್ನು ಗುನುಗುತ್ತಾ ಹೊರಬಂದ ನಿಂತವಳೆ ಎದುರು ಮನೆಯತ್ತ ನೋಡುತ್ತಾಳೆ. ಬಾಗಿಲು ಹಾಕಿರುತ್ತದೆ. 'ಅರೆರೆರೆ ಕೀ ಕೊಡದೆ ಹೋದ್ನೆ ಮೆಡಿಕಲ್ ಬಾಯ್? ಅನಾಯಾಸವಾಗಿ ದೊರಕುತ್ತಿದ್ದ ಮತ್ತೊಂದು ಸುಸಂಧಿ ಮಿಸ್ ಆಯ್ತೇ?' ಎಂದು ಪೇಚಾಡುತ್ತಾಳೆ.

ನಾಳೆಯೂ ಈ ಹುಡುಗ ಬರುವಂತಾದರೆ ಅಮ್ಮ ಎಲ್ಲಿಗಾದರೂ ಹೋಗುವಂತಾದರೆ ಎಷ್ಟುಚೆನ್ನ ಎಂದು ಕನಸು ಕಾಣುತ್ತಲೇ ಮುಖ ತೊಳೆದು ಜಡೆ ಹೆಣೆದುಕೊಳ್ಳುತ್ತಾಳೆ. ಕನ್ನಡಿಯಲ್ಲಿ ಕಾಣುವ ಪ್ರತಿಬಿಂಬ ಹಿಂದಿನ ದಿನಗಳಿಗಿಂತ ಇದು ಸುಂದರವಾಗಿ ತೋರುತ್ತದೆ. ತುಂಬು ತುಟಿಗಳನ್ನು ನೋಡಿಕೊಳ್ಳುವಾಗ ಮೈತುಂಬಾ ಪುಳಕ. ಕಣ್ತುಂಬಾ ಕನಸು. ಕಾನ್ವೆಂಟಿನಿಂದ ಬಂದ ಮಧು 'ಕೀ' ಕೇಳುತ್ತಾನೆ. 'ನಿಮ್ಮ ಅಂಕಲ್ ಇಸ್ಕೊಂಡಿದ್ದರು ಕಣೋ, 'ಕೀ' ಕೊಟ್ಟಿಲ್ಲ. ಅವರು ಮನೇಲಿರಬೇಕು ನೋಡು' ಅನ್ನುತ್ತಾಳೆ ಪಂಕಜ.

'ಯಾವ ಅಂಕಲ್ ಆಂಟಿ? ಅನ್ನುತ್ತಾನೆ ಮಧು ತಬ್ಬಿಬ್ಬಾಗಿ, 'ಅದೇನೋ ಕ್ಯಾಡ್‌ಬರೀಸ್ ಅಂಕಲ್' ಅನ್ನುತ್ತಾಳೆ.

'ಅವರೇಕೆ 'ಕೀ' ಇಸ್ಕೊಂಡ್ರು ಆಂಟಿ?' ಮುಖ ಮುಖ ನೋಡುವನು ಮಧು.

'ಅದೇನೋ ನಿಮ್ಮ ಡಾಕ್ಟರ್ ಅಂಕಲ್ಲೂ' ರಾಗ ಎಳೆಯುತ್ತಾಳೆ ಪಂಕಜ. ಮತ್ತೆ ಮತ್ತೆ ಕೇಳುತ್ತಾನೆ. ಅವಳಿಗೇನು ಹೇಳಬೇಕೋ ತೋಚದೆ ಅಮ್ಮನ ಬಳಿ ಹೇಳಿಕೊಳ್ಳುತ್ತಾಳೆ. 'ಹೌದು! ಆತ ಎದ್ದು ಬಂದಿರ್ತಾನೆ 'ಕೀ' ಕೊಡೋಕೆ. ನಿನಗೋ ಗಡದ್ದು ನಿದ್ದೆ ಎದ್ದಿರಲ್ಲ. ಹಾಗೆ ಹೋಗಿರುತ್ತಾನೆ. ಅದಿರ್ಲಿ ಈಗ ಆ ಹುಡುಗ ಇಲ್ಲಿಗೆ ಆಗಾಗ ಬರ್ತಾ ಇದ್ದದ್ದು ಮಧು ತಾಯಿಗೆ ಹೇಳಬೇಕಾಯ್ತಲ್ವೆ? ಗಂಡ ಹೆಂಡತಿ ಮಧ್ಯೆ ನಾವೇ ಜಗಳ ತಂದಿಟ್ಟ ಹಾಗೆ ಆಗುತ್ತಲ್ವೆ?' ಎಂದು ಅಮ್ಮ ಪಂಕಜಳತ್ತ ದೂರುವ ನೋಟ ಬೀರುತ್ತಾ ಮಧುವನ್ನು ಒಳ ಕರೆದು ಕೂರಿಸಿ ತಿಂಡಿ ಕೊಡುತ್ತಾಳೆ. ಪಂಕಜಳದ್ದು ಒಳಗೆ ಪೇಚಾಟ. ಮಧು ತಿಂಡಿ ತಿಂದು ಮುಗಿಸುವುದರಲ್ಲಿ ಬೈಕಲ್ಲಿ ಎದುರು ಮನೆಯಾತ, ಸ್ಕೂಟಿಯಲ್ಲಿ ಮನೆಯಾಕೆ ಬರುತ್ತಾನೆ. ಅವರ ಬಳಿ ಅಮ್ಮನೇ ಮಾತನಾಡುವಾಗ ಪಂಕಜಳಲ್ಲೀಗ ಅಪರಾಧಿಭಾವ.

ವಿಷಯ ಕೇಳಿ ದಂಪತಿಗಳಿಬ್ಬರೂ ಅವಕ್ಕಾಗುತ್ತಾರೆ. 'ಅಲ್ಲಾರೀ, ನನ್ನ ತಮ್ಮ ಪರೀಕ್ಷೆ ಮುಗಿಸಿ ಹಳ್ಳಿಗೆ ಹೋಗಿ ತಿಂಗಳ ಮೇಲಾಯಿತಲ್ಲಾರೀ? ಇವನು ಯಾರ್ರೀ?' ಎದುರು ಮನೆಯಾತ ಅಮ್ಮನ ಮೇಲೆ ದನಿ ಏರಿಸುತ್ತಾನೆ. ಪಂಕಜಳಿಗೆ ಕೋಪ ಬರುತ್ತದೆ. 'ಅವನೇರಿ ವಾರದ ಕೆಳಗೆ ನಿಮ್ಮನೆಗೆ ಬಂದಿದ್ದನಲ್ಲ. ಆ ಹುಡುಗಾ... ಅದೇ ಭಾನುವಾರಾರೀ... ನೀವು ಮನೇಲಿದ್ರಿ ಇಬ್ಬರೂ' ಪಂಕಜ ಅರ್ಥ ಮಾಡಲೆತ್ನಿಸುತ್ತಾಳೆ.

'ಅಯ್ಯೋ ಅವನಾ! ಅವನು ನನ್ನ ಬಳಿ ಕೆಲಸ ಕೇಳೋಕೆ ಬಂದಿದ್ದಾ ರೀ ಸಣ್ಣಗೆ ರೇಗುತ್ತಾನೆ ಆತ. ಪಂಕಜಳಿಗೆ ಸಣ್ಣಗೆ ತಲೆ ಸುತ್ತು ಬರುತ್ತದೆ. 'ಅವನೆ ಕಣೋ ಮಧು ನಿನ್ನ ಜೊತೆಗೆ ಬರ್ತಿದ್ನಲ್ಲ... ನೀನು ಚಾಕೊಲೇಟ್ ಅಂಕಲ್ ಅಂತಿದ್ದೆನಲ್ಲೋ' ಎಂದು ಗಾಬರಿಗೊಳ್ಳುತ್ತಾಳೆ. 'ಅವನು ಚಾಕೊಲೇಟ್ ಕೊಡಿಸಿ ಹಾಗನ್ನುಅಂತ ಹೇಳಿಕೊಟ್ಟಿದ್ದ ಆಂಟಿ. ನಂದೂ ಈ ಕಡೆನೇ ಮನೆ ಇರೋದು ಅಂತ ನನಗೆ ಕಂಪನಿ ಕೊಡೋನು ಅಷ್ಟೆ ಆಂಟಿ ಎನ್ನುತ್ತಾ ಮಧು ನಕ್ಕಾಗ ಪಂಕಜಳಿಗೆ ಅಳು ಬರೋದೊಂದು ಬಾಕಿ.

'ಅಯ್ಯೋ ರಾಮ, ಮೊದಲು ಬೀಗ ಜಡೀರಿ. ಏನಿದೆಯೋ ಏನಿಲ್ಲವೋ' ಮನೆಯಾಕೆ ಬಾಯೋಬಾಯಿ ಮಾಡುತ್ತಾಳೆ. ನೆರೆಹೊರೆಯವರೆಲ್ಲಾ ಜಮಾಯಿಸುತ್ತಾರೆ. ದಂಪತಿ ಮನೆಯತ್ತ ಹೋದಾಗ ಪಂಕಜ ಕೂಡ ತನ್ನ ತಾಯಿ ಜೊತೆಗೆ ಭೀತಳಾಗಿ ಹಿಂಬಾಲಿಸುತ್ತಾಳೆ. ಮನೆ ಬೀಗ ಹಾಕಿರುವುದಿಲ್ಲ. 'ಅವನು ಒಳಗಡೆ ಇರ್ಬೇಕು ನೋಡ್ರಿ' ಎಂದು ಮನೆಯಾಕೆ ರೇಗುತ್ತಾಳೆ. ಇಬ್ಬರೂ ಒಳ ಹೋಗುತ್ತಾರೆ. ಮನೆಯೆಲ್ಲಾ ಸೂರೆಯಾಗಿದೆ ಗೋದ್ರೆಜ್ ಬೀಗ ತೆರೆದಿದೆ. ಒಳಗಿರುವ ಚಿನ್ನ ಬೆಳ್ಳಿಯ ಸಾಮಾನುಗಳು ಮಾಯವಾಗಿವೆ. ಐದು ಲಕ್ಷ ನಗದೂ ಇಲ್ಲ. ಉಲ್ಲನ್ ಸೂಟು, ರೇಶಿಮೆ ಸೀರೆ ತುಂಬಿದ ಟ್ರಂಕ್‌ಗಳು ಕಾಣುವುದಿಲ್ಲ. ಮನೆಯಾತ ಪೋಲಿಸರಿಗೆ ಫೋನ್ ಮಾಡುತ್ತಾನೆ.

ಪಂಕಜ, ಅವಳ ತಾಯಿ ಪರದೇಶಿಗಳಂತೆ ನಿಂತಿರುತ್ತಾರೆ. ಇವರತ್ತಲೇ ಜನರ ನೋಟ. ತಮಗೆ ಸಾವಾದರೂ ಬರಬಾರದೆ ಅಂದುಕೊಳ್ಳುತ್ತಾರೆ ತಾಯಿ–ಮಗಳು. ಬಂದಿದ್ದು ಪೊಲೀಸ್ ವ್ಯಾನ್. ಮನೆಯಾತ ಪೊಲೀಸರ ಬಳಿ ತನ್ನಳಲನ್ನು ತೋಡಿಕೊಳ್ಳುತ್ತಾ ಎಲ್ಲಾ ಇವರಿಂದಾನೆ ಆಗಿದ್ದು ಎಂಬಂತೆ ತಾಯಿ ಮಗಳತ್ತ ಕೆಕ್ಕರಿಸುತ್ತಾನೆ. 'ಓಕೆ ಸರ್. ನೀವು ಸ್ಟೇಷನ್ನಿಗೆ ಬಂದು ಒಂದು ಕಂಪ್ಲೇಂಟ್ ಕೊಡಿ' ಎಂದ ಇನ್‌ಸ್ಪೆಕ್ಟರ್, 'ಹೂ... ನೀವೂ ಬನ್ನಿ' ಎಂದು ಪಂಕಜ ಅವಳಮ್ಮನತ್ತ ದುರುಗುಟ್ಟುತ್ತಾನೆ.

ಪಂಕಜಳ ಪಾಲಿಗೆ ಪ್ರಪಂಚವೇ ಸ್ತಬ್ಧವಾದ ಅನುಭವ. ಅಮ್ಮ ಬಿಕ್ಕಳಿಸುತ್ತಿರುವುದು ಮಾತ್ರ ಕೇಳುತ್ತಿರುತ್ತದೆ.

ಪ್ರತಿಕ್ರಿಯಿಸಿ: feedback@sudha.co.in